# ಧೂಳಿನ ಸಂಜೆಯ ಗೋಧೂಳಿ!

ಮೊನ್ನೆ ಸಂಜೆ ಆಫೀಸು ಮುಗಿಸಿಕೊಂಡು, ಬಸ್ಸು ಹಿಡಿಯಲೋಸುಗ ನಿಲ್ದಾಣದೆಡೆಗೆ ನಡೆಯುತ್ತಿದ್ದೆ, ಸೂರ್ಯಾಸ್ತವಾಗಿ ಸ್ವಲ್ಪ ಹೊತ್ತಾಗಿತ್ತು, ರಸ್ತೆಯ ತುಂಬ ವಾಹನದಟ್ಟಣೆ. ಒಂದು ವಾರದಿಂದ ಮಳೆಯಿಲ್ಲವಾದುದರಿಂದಲೂ, ರಸ್ತೆಗಳ ದುರಸ್ತಿ ಕಾರ್ಯ ನಡೆಯುತ್ತಲಿದ್ದುದರಿಂದಲೂ, ನಿಲ್ದಾಣದ ಸುತ್ತಮುತ್ತ ಧೂಳು ಎದ್ದಿತ್ತು. ಬಂದ ಬಸ್ಸನ್ನು ಹತ್ತಿ, ಕಿಟಕಿಯೆಡೆಗೆ ಕುಳಿತು, ಹೊರಗೆ ದೃಷ್ಟಿ ಹಾಯಿಸಿದೆ, ಇದ್ದಕ್ಕಿದ್ದಂತೇ ಕತ್ತಲಾಗುತ್ತಿದ್ದ ಆಕಾಶವೆಲ್ಲ ಹಳದೀ-ಬಿಳೀ ಬಣ್ಣದಿಂದ ರಾರಾಜಿಸಿತು. ಆ ಬೆಳಕಿನಲ್ಲಿ ರಸ್ತೆಯ ಧೂಳೂ, ಓಡಾಡುತ್ತಿದ್ದ ವಾಹನಗಳೂ, ಅವುಗಳ ಹೊಗೆಯೂ, ಮಡಿವಾಳದ ಸಂತೆಯ ಕೊಳಕೂ, ಸಂತೆಯ ಜನರೂ, ನಿಲ್ದಾಣದಲ್ಲಿ ಬೆವೆತು ನಿಂತಿದ್ದ ಮುಖಗಳೂ ಎಲ್ಲವೂ ಮೋಹಕ ಚಿತ್ತಾರವಾಗಿ ಪರಿವರ್ತಿತಗೊಂಡವು...

...ಮೂರು ತಿಂಗಳ ಹಿಂದೆ, ನಾನೂ ನನ್ನ ಸ್ನೇಹಿತ ಕರುಣನೂ ಬಾಳೆಹೊನ್ನೂರಿನ ನನ್ನ ಪ್ರಾಣಸ್ನೇಹಿತೆಯೊಬ್ಬಳ ಮನೆಗೆ ಹೋಗಿದ್ದೆವು. ಅದೂ ಅವನ Unicorn ಬೈಕಿನ ಮೇಲೆ. ನನಗಿಂತ ಸಾಕಷ್ಟು ಎತ್ತರಕ್ಕೆ, ತೆಳ್ಳಗಿರುವ ಅವನು ಗಾಡಿ ಮೇಲೆ ಮಿಡತೆಯಂತೆ ಮಂಡಿಗಳ ಮಡಿಸಿ ಕುಳಿತು ಗಾಡಿ ಓಡಿಸಿದನೆಂದರೆ, ಹಿಂದೆ ಕುಳಿತ ನನ್ನ ಹೃದಯ ನನ್ನ ಬಾಯಿಯಲ್ಲಿ! "ಬಾಳೆಹೊನ್ನೂರಿಗೆ ಬರ್ತೀಯಾ" ಅಂತ ನಾನು ಕೇಳಿದ್ದಕ್ಕೆ, "ಬಸ್ಸು ಬೋರ್ ಕಣೋ, ಗಾಡಿ ಮೇಲೆ ಹೋಗೋಣ" ಅಂದಿದ್ದ. ಎಲ್ಲ ಸೇರಿ ಒಟ್ಟು ಎಂಟುನೂರು ಕಿಲೋ ಮೀಟರ್‌ಗಳ, ನಾಲ್ಕು ದಿನದ ಪ್ರವಾಸ. ಸರಿಯೆಂದುಕೊಂಡು ಶುಕ್ರವಾರ ಸಂಜೆ ಏಳಕ್ಕೆಲ್ಲ ಬೆಂಗಳೂರು ಬಿಟ್ಟು, ನಡುನಡುವೆ ಟೀ, ನೀರು, ಊಟ ಅಂತೆಲ್ಲ ನಿಲ್ಲಿಸುತ್ತ, ರಾತ್ರಿಯ ಕತ್ತಲ ಮೌನ, ಚಿಕ್ಕಮಗಳೂರು ತಲುಪಿ ಬಾಳೆಹೊನ್ನೂರಿನ ಕಡೆಗೆ ತಿರುಗಿದ ಮೇಲೆ ಶುರುವಾದ ಕಾಡು, ತಿರುವು-ಮುರುವು ರಸ್ತೆಗಳು, ದಟ್ಟ ಮಂಜು, ಎಲ್ಲವನ್ನೂ ನೋಡುತ್ತ, ಅನುಭವಿಸುತ್ತ ಬಾಳೆಹೊನ್ನೂರು ತಲುಪಿದಾಗ ಶನಿವಾರ ಬೆಳಿಗ್ಗೆಯ ಮೂರುವರೆ ಗಂಟೆ!

ಎರಡು ದಿನಗಳ ಪ್ರವಾಸ ನಾಲ್ಕುದಿನಗಳಾಗಿ ಖಾಂಡ್ಯದ ಭದ್ರಾನದಿ ಹರವು, ಶೃಂಗೇರಿ, ಟೀ ಎಸ್ಟೇಟುಗಳು, ತೀರ್ಥಕೆರೆ, ಜಯಪುರ ಅಂತೆಲ್ಲ ತಿರುಗಿದ್ದಾಯ್ತು. ಎಲ್ಲೆಡೆ ಕರುಣನ ಬೈಕು, ಲಂಬೂ looks, ಮತ್ತೆ 'ಜೋಗಿ'ಯ ಸ್ಟೈಲ್‌ನ ಅವನ ಉದ್ದ ಕೂದಲು ಹೆಸರುವಾಸಿಯಾದವು. ನಾಲ್ಕು ದಿನವೂ ನನ್ನ ಸ್ನೇಹಿತೆಯ ರೂಮಿನಲ್ಲಿ ನಮಗೆ ರಾಜಾತಿಥ್ಯ! ಬಡಿಸಲು ನಿಂತರೆ ಅವಳು ಅಮ್ಮನೇ. ಸುಮ್ಮನೆ ಕೂರಲೂ ಬಿಡುವುದಿಲ್ಲ, "ಏನಾದ್ರೂ ತಿಂತೀರೇನ್ರೋ?" ಅಂತಾ ಕೇಳ್ತಾನೇ ಇರ್ತಾಳೆ. ಅವಳು ಮಾಡಿದ ನನಗಿಷ್ಟವಾದ ಚಿಕನ್ನು, ನಾನು ತಿನ್ನದ ಮೀನು, ನಾನೇ ತಯ್ಯಾರುಮಾಡಿದ ಅಕ್ಕಿ ಪಾಯಸ, ಪೂರಿ-ಸಾಗು ಎಲ್ಲವನ್ನೂ ತಿಂದದ್ದಾಯಿತು. ಅವಳ ಸಹೋದ್ಯೋಗಿ, ನಮ್ಮೆಲ್ಲರ ಸ್ನೇಹಿತರಾದಂತಹ ಮಂಜುಳಾ ಮೇಡಂ ಮನೆಯಲ್ಲೂ ಒಂದು ದಿನದ ರಾತ್ರಿಯ ಊಟ! ಇವಳು ಅಮ್ಮನಾದರೆ ಅವರು ಇವಳಮ್ಮ! ಬೇಡವೆಂದು ತಟ್ಟೆಯ ಮೇಲೆ ಅಡ್ಡಡ್ಡ ಮಲಗಿದರೂ ಅವರಿಗಿಷ್ಟ ಬಂದಷ್ಟು ಬಡಿಸದೇ ಬಿಡುವವರಲ್ಲ, ಅವರು ಬಡಿಸಿದ ಮೇಲೆ ನಾವು ತಿನ್ನಲೇ ಬೇಕು! ನನ್ನ ಸ್ನೇಹಿತನಿಗಂತೂ ಅವರು ಇಟ್ಟ ಅಡ್ಡ ಹೆಸರುಗಳಿಂದಲೇ ಸುಸ್ತಾಗಿತ್ತು, "ಜೋಗಿ, ಜಂಗಮ, ಜುಲ್ಫೀ..."

ಮರುದಿನವೂ ಅವರು ತಮ್ಮ ಮನೆಗೆ ಕರೆದಾಗ ನಾವು ಹೆದರಿಯೇ ಹೇಳಿದೆವು, "ರಾತ್ರಿ ಊಟ ಅಂತೆಲ್ಲ ಕಾರ್ಯಕ್ರಮ ಇಟ್ಕೋಬೇಡಿ!" ಅವರು ಒಪ್ಪಿದ ಮೇಲೆಯೇ ನಾವು (ನಾನು ಏಳು ವರ್ಷ ಓದಿದ್ದ ವಸತಿ ಶಾಲೆಯ ಆವರಣದೊಳಗೇ ಇದ್ದ) ಅವರ ಮನೆಗೆ ಹೋಗಿದ್ದು. ನಾವು ಹೋಗಿದ್ದೇ ಮಂಜುಳಾ ಮೇಡಂ ಮತ್ತವರ ಗಂಡ ತುಂಬಾ ಖುಷಿಯಾದರು. "ಒಂದ್ ಕಾಫಿ ಕುಡೀರಿ, ಸುಮ್ನೇ ಕಾಲ ಕಳೀತಾ ಇರಿ, ಲೈಟಾಗಿ ತಿಂಡಿ ಮಾಡ್ತೀನಿ" ಅಂದರು. ನಾನು ಅವರನ್ನು ಮತ್ತೆ ಎಚ್ಚರಿಸಿದೆ, "ತಿಂಡಿ ಅಂದ್ರೆ ರಾತ್ರಿ ಊಟ ಅಲ್ಲ ಮತ್ತೆ!" ಅವರು ಒಪ್ಪಿದವರಂತೆ ಸುಮ್ಮನೆ ತಲೆಯಾಡಿಸಿದರು.

ನಾನೂ ಕರುಣನೂ ಕಾಫಿ ಕುಡಿದು, ಅವರ ಮನೆಯ ಟೆರೇಸ್ ಮೇಲಕ್ಕೆ ಹತ್ತಿದೆವು. ಬಿಡದ ಮುಂಗಾರು ಮಳೆಯಿಂದ ಟೆರೇಸ್‌ನ ಮೇಲೆ ಬೆಳೆದಿದ್ದ ಹಾವಾಸೆಯೆಲ್ಲ ಹಸಿರಾಗಿತ್ತು. ಟೆರೇಸ್‌ನ ಕೈಗೋಡೆಗೆ ಒರಗಿ ನಿಂತು ವಿಶಾಲವಾಗಿ ಕಾಣುತ್ತಿದ್ದ ನಮ್ಮ ಸ್ಕೂಲು, ಹಸಿರು, ರಸ್ತೆ, ದೊಡ್ಡದಾದ ಆಟದ ಬಯಲು, ಅದರ ವ್ಯಾಪ್ತಿ ಎಲ್ಲವನ್ನೂ ನೋಡುತ್ತ ಉದ್ಗಾರ ತೆಗೆದ, "______ man! Cool!"

ಎಲ್ಲೆಡೆ ಪದರ ಪದರವಾಗಿ ಬೇರೆ ಬೇರೆ ಸಾಂದ್ರತೆಯಲ್ಲಿ ಆಕಾಶದ ಉದ್ದಗಲಕ್ಕೂ ಮುಚ್ಚಿಕೊಂಡಿದ್ದ ಮಳೆಯ ಮೋಡ, ಪಶ್ಚಿಮದಲ್ಲಿ ಆಗ ತಾನೇ ಹರಿದುಕೊಂಡು ಇಳಿ ಸಂಜೆಯ ಅಳಿದುಳಿದ ಬೆಳಕು ಹೊರಚೆಲ್ಲಿತ್ತು, ಸೂರ್ಯಾಸ್ತಮಾನವಾಗಿತ್ತು. ಗಾಳಿಯಿರಲಿಲ್ಲ, ತಣ್ಣಗಿನ ಹವೆ. ನಾವಿಬ್ಬರೂ ನಿಂತು ಮಾತನಾಡಿದೆವು. ನೋಡುತ್ತಿದ್ದಂತೆಯೇ ಕತ್ತಲಾಗುತ್ತಿದ್ದ ಆಕಾಶವೆಲ್ಲ ಬೆಳಗಿತು! ಹಳದೀ-ಬಿಳೀ ಬೆಳಕು ಭೂಮಿಯನ್ನು ತೊಯ್ಯಿಸಿತು! ನಾನು ದೀರ್ಘವಾಗಿ ಉಸಿರೆಳೆದುಕೊಂಡೆ.

ಅವನು ಮತ್ತೆ ತನ್ನ ಉದ್ಗಾರವೆಸೆದ, "Wow! ಏನೋ ಇದು? ಹೀಗಾಯ್ತು?"

ನಾನು ನಸುನಕ್ಕು ವಿವರಿಸಿದೆ, "ಗೊತ್ತಿಲ್ವೇನೋ? ಇದಕ್ಕೆ ಇಂಗ್ಲೀಷ್‌ನಲ್ಲಿ twilight ಅಂತಾರೆ, ಕನ್ನಡದಲ್ಲಿ ಗೋಧೂಳಿ ಇರಬಹುದು."
ಅವನು ತನ್ನ ಪೇಟೆಂಟೆಡ್ ಡೈಲಾಗ್ ಹೊಡೆದ, "ಸಕ್ಕತ್ತಾಗಿದೆ, ಅಲ್ವಾ?"
ನಾನು ಕೇಳದ ವಿವರಣೆ ಕೊಡಲು ಮುಂದಾದೆ, "ಬಹುಶಃ ಮಳೆಮೋಡವಿದ್ದಾಗ ಮಾತ್ರ ಹೀಗಾಗುತ್ತೆ ಕಣೋ, ಅಲ್ಲಿ ನೋಡು, ಪಶ್ಚಿಮದ ದಿಗಂತದಂಚಿನಲ್ಲಿ ಮೋಡಗಳು ಕವಿದಿರಬಾರದು, ಅಲ್ಲಿಂದ ಸ್ವಲ್ಪ ಮೇಲೆ ದಟ್ಟವಾದ ಮಳೆ ಮೋಡಗಳಿದ್ದರೆ, ಸೂರ್ಯಾಸ್ತಮಾನವಾದ ನಂತರದ ಬೆಳಕು, ನೇರವಾಗಿ ಮೇಲಿನ ಮೋಡಗಳಿಗೆ ಯಾವುದೋ ಒಂದು ಕೋನದಲ್ಲಿ ತಾಕಿ, ವಕ್ರೀಭವನಕ್ಕೊಳಗಾಗಿ ಈ ರೀತಿ ಬೆಳಕಾಗುತ್ತದೆ!"
"ಹೌದೇನೋ? ನಂಗಿವೆಲ್ಲ ಗೊತ್ತೇ ಇರಲಿಲ್ಲ!", ತನ್ನ ಪಕಪಕ ನಗೆ ನಕ್ಕ.
"ಹೂಂ ಮತ್ತೆ. ಮೋಡದ ಸಾಂದ್ರತೆ, ವಕ್ರೀಭವನದ ಕೋನ, ಸಮಯವನ್ನಾಧಾರಿಸಿ ಇದರ ಬೆಳಕೂ ಬದಲಾಗುತ್ತದೆ, ಕೆಲವೊಮ್ಮೆ ಬೆಳ್ಳಗೆ ಹೀಗೆ ನಿಯಾನ್ ಬೆಳಕಿನ ತರ, ಕೆಲವೊಮ್ಮೆ ಬರೀ ಹಳದೀ ಸ್ವರ್ಣ ರಶ್ಮಿ, ಕೆಲವೊಮ್ಮೆ ಕೇಸರಿ-ಕೆಂಪು ಸ್ನಾನ, ಇಲ್ಲದಿದ್ದರೆ ತಿಳೀ ನೀಲಿ ಬೆಳಕಿನ ಸಾಗರ."
"_____ man, ಬೆಂಗಳೂರಿನಲ್ಲಿ ಹಿಂಗೆಲ್ಲ ಆಗಲ್ಲ ಅಲ್ವಾ?"
"ಯಾಕಾಗಲ್ಲ, ಎಲ್ಲಾಕಡೆ ಆಗುತ್ತಪ್ಪ. ಬೆಂಗಳೂರಿನಲ್ಲಿ ಅಪರೂಪವಿರಬಹುದು. ಆದರೂ ಬೆಂಗಳೂರಿನ twilight ನೋಡೋಕೆ ನಾವುಗಳು ಸಂಜೆಹೊತ್ತು ಹೊರಗಿದ್ದರೆ ತಾನೇ?"
"ಅದೂ ನಿಜ ಕಣೋ! ಎಲ್ಲೋ ಮೂಲೇಲಿ computer ಕುಟ್ಕೊಂಡ್ ಸಾಯ್ತಾ ಇರ್ತೀವಿ. ಎಲ್ಲದರ ಬಗ್ಗೆ ಆಸಕ್ತಿ, ಕುತೂಹಲವನ್ನೆಲ್ಲ ಕಳ್ಕೊಂಡ್‌ಬಿಟ್ಟಿದೀವಿ" ಅವನು ನಿಜವಾದ ಕಳಕಳಿಯಿಂದ ಹೇಳಿದ.
ಗೋಧೋಳಿಯ ಬೆಳಕಿನಲ್ಲಿ ಎಲ್ಲವೂ ಸುಂದರವಾಗಿ ಕಾಣುತ್ತದೆ. ಗಿರಿ, ವನ, ರಸ್ತೆ, ಕಟ್ಟಡ, ಎಲ್ಲ ಜೀವ ಜಂತುಗಳೂ ಕೂಡ. ನಕ್ಕು ನಾನವನನ್ನು ಕೇಳಿದೆ, "ನೋಡೋ, ನನ್ನಂತ mirror-cracking material ಕೂಡ ಈಗ smart & handsome ಕಾಣ್ತಾಯಿಲ್ವಾ?"
ಅವನು ಗಲಗಲ ನಕ್ಕು ಒಪ್ಪಿಕೊಂಡ, "ನೀನು smart ಬಿಡು!"
"ಹೂಂ ಮತ್ತೆ. ನಮ್ಮಂತವರಿಗೆ ಬೇಜಾರಾಗದಿರಲಿ, ಸಂತೋಷವಾಗಲಿ ಅಂತ್ಲೇ ಬೆಂಗಳೂರಿನ ಬಟ್ಟೆ ಅಂಗಡಿಗಳಲ್ಲಿ ಇಂಥದ್ದೇ lights ಹಾಕಿರ್ತಾರೆ. ಆ ಬೆಳಕಿನಲ್ಲಿ, ಅವರ ಬಟ್ಟೆಯಲ್ಲಿ ನಮಗೆ ನಾವೇ ಬೆರಗಾಗಿ, ಸುಮ್ಮನೆ ಖರೀದಿ ಮಾಡೇ ಬಿಡ್ತೀವಿ"
ನನ್ನ ಕುತರ್ಕಕ್ಕೆ ಸುಮ್ಮನೆ ನಕ್ಕು ತಲೆಯಾಡಿಸಿದ ಮತ್ತು ಕತ್ತೆತ್ತಿ ಎಲ್ಲೆಡೆ ನೋಡುತ್ತ, ಆಕಾಶದಲ್ಲಿ ಹರಡಿದ ಬೆಳಕನ್ನು ತನ್ನ ಕಣ್ಣುಗಳ ಹೊಳಪಿನೊಳಕ್ಕಿಳಿಸಿಕೊಳ್ಳುತ್ತ ಕೇಳಿದ, "ಇನ್ನೂ ಎಷ್ಟೊತ್ತು ಹೀಗೇ ಇರುತ್ತೋ?"
"ಇರುತ್ತೆ ಕಣೋ, ಇನ್ನೂ ಅರ್ಧ-ಮುಕ್ಕಾಲು ಗಂಟೆ?" ನಾನು ಕೈಗಳನ್ನಗಲಿಸಿಕೊಂಡು ಕತ್ತೆತ್ತಿಕೊಂಡು ನಿಂತೆ. ಅವನು ಕೈಕಟ್ಟಿಕೊಂಡು, ನಸುನಗುತ್ತಲೇ ತನ್ನ ಸುತ್ತಲೇ ತಿರುಗಿದ.
"ನನ್ನ favorite author ದು ಒಂದು novel ಇದೆ ಕಣೋ, Twilight Zone ಅಂತಾ"
"ಹೂಂ dean koontz ಅಲ್ವಾ?" ಅಂದು ತಲೆಯಾಡಿಸಿದ.
ಇಷ್ಟೇ ಇವನ ಆಸಕ್ತಿ ಅಂದುಕೊಂಡು ನಾನು ವಿಶಾಲವಾದ ಟೆರೇಸಿನ ನಡುವಿಗೆ ಹೋಗಿ ಕೈಕಾಲು ಅಗಲಗಲವಾಗಿ ಚಾಚಿಕೊಂಡು, ಪೂರ್ವದೆಡೆಗೆ ತಲೆ ಹಾಕಿ ಅಂಗಾತ ಮಲಗಿದೆ, ಅವನೂ ಮರು ಮಾತನಾಡದೇ ನನ್ನ ಪಕ್ಕವೇ ಕೈಕಾಲು ತಾಕದಷ್ಟು ದೂರಕ್ಕೆ ಸಮಾನಾಂತರವಾಗಿ ಚಾಚಿಕೊಂಡು ಮಲಗಿದ, ಇಬ್ಬರ ಮೇಲೂ ಫಳಫಳಿಸುತ್ತಿದ್ದ ಸಂಜೆಯ ಮಳೆ ಮೋಡದ ಹೊದಿಕೆ.
"ಹೂಂ. this is nice!" ನೋಡುತ್ತಿದ್ದಂತೆಯೇ ನಮ್ಮ ಮೇಲೆ ಬರೀ ತಲೆಯೆತ್ತರದಲ್ಲಿ ಎರಡು ಬೆಳ್ಳಕ್ಕಿಗಳು ಹಾರಿಹೋದವು.
ಅವನು ಮತ್ತದೇ ಉದ್ಗಾರ ತೆಗೆದ! "_____ ಏನೋ, ಇಷ್ಟು ಹತ್ತಿರದಲ್ಲೇ ಹಾರಿಹೋಗ್ತಿವೆ?"
"ಹೂಂ ಮತ್ತೆ. ಸುತ್ತಮುತ್ತ ಬರೀ ಕಾಡು ತಾನೇ? ಅವಕ್ಕೇನು ಹೆದರಿಕೆ?"
ಮತ್ತೆರೆಡು ಬೆಳ್ಳಕ್ಕಿ, ಅವುಗಳ ಹಿಂದೆ ಮತ್ತೊಂದೈದು ಬೆಳ್ಳಕ್ಕಿಗಳ ಹಿಂಡು, ಆ ಹಿಂಡಿನ ಹಿಂದೆ ಒಬ್ಬಂಟಿ ಒಂದೇ ಬೆಳ್ಳಕ್ಕಿ, ಹೀಗೇ ಕ್ಷಣಾರ್ಧದಲ್ಲೇ ನಮ್ಮ ಮೇಲೆ ಬೆಳ್ಳಕ್ಕಿಗಳ ಮೆರವಣಿಗೆ ಶುರುವಾಯಿತು. ಕಾಲುಗಳ ಮಡಿಚಿಕೊಂಡು, ದೇಹವನ್ನು ನೀಳವಾಗಿಸಿಕೊಂಡು, ಬಿಳೀ ರೆಕ್ಕೆಗಳ ಸಮಾಧಾನವಾಗಿ ಬಡಿಯುತ್ತ, ಎಲ್ಲವೂ ಪಶ್ಚಿಮದಿಂದ ಪೂರ್ವದೆಡೆಗೆ, ರಸ್ತೆಯಲ್ಲಿ ಜನ ಗುಂಪುಗುಂಪಾಗಿ-ಒಬ್ಬೊಬ್ಬರೇ ತಂತಮ್ಮ ಗಮ್ಯಗಳೆಡೆಗೆ ನಡೆದು ಹೋಗುವಂತೆ, ಆಕಾಶದಲ್ಲಿ ಹಾರುತ್ತಿದ್ದವು. ನಮ್ಮ ಮಾತು ಹಕ್ಕಿಗಳ ಹಾರುವಿಕೆ, ವಲಸೆ, ಅವುಗಳ ಕರಾರುವಕ್ಕಾದ ಸಮಯ ಪಾಲನೆ, ಪಥ, ಇತ್ಯಾದಿಗಳೆಡೆಗೆ ಹೊರಳಿತು, ನಡುನಡುವೆ ದೀರ್ಘ ಮೌನ. ನಾನು ಸುಮ್ಮನಿದ್ದವನು, ಎರಡೇ ಹಾರುತ್ತಿದ್ದ ಬೆಳ್ಳಕ್ಕಿಗಳ ಹಿಂಡು ನಮ್ಮ ಮೇಲೆ ಬಂದಾಗ, ಜೋರಾಗಿ ಚಪ್ಪಾಳೆ ಹೊಡೆದೆ, ಒಂದು ಬೆಳ್ಳಕ್ಕಿ ಗಾಬರಿ ಬಿದ್ದು, ತನ್ನ ಸಂಗಾತಿಯನ್ನು ಬಿಟ್ಟು, ಪಕ್ಕಕ್ಕೆ ಹಾರಿ, ದೀರ್ಘವಾದ ಬಳಸು ಹಾದಿ ಹಿಡಿಯಿತು. ಕರುಣ "ಯಾಕೋ? ಲೂಸು" ಅಂದ. ನಾನು

ಮಲಗಿದ್ದಲ್ಲೇ ಕತ್ತು ತಿರುಗಿಸಿ, ಅತ್ತ ನೋಡಿದೆ, ನನ್ನೊಡನೆ ಅವನೂ ನೋಡಿದ, ಪಕ್ಕಕ್ಕೆ ಹಾರಿ, ಬೇರೆ ಹಾದಿ ಹಿಡಿದ್ದಿದ್ದ ಬೆಳ್ಳಕ್ಕಿ ಮುಂದೆ, ಬಹಳ ಮುಂದೆ ಹೋಗಿ, ತನ್ನ ಸಂಗಾತಿಯನ್ನು ಸೇರಿತು.

ಅವನು ಪಕಪಕ ನಕ್ಕ. "ನೋಡಿದ್ಯಾ? ಅವು ಸಕ್ಕತ್ intelligent!"

ನಾನು ಹಾಗೇ ಕಣ್ಣು ಮುಚ್ಚಿದೆ. ಮುಚ್ಚಿದ ಕಣ್ಣ ರೆಪ್ಪೆಗಳ ಹಿಂದೆಯೂ ಬೆಳಕು, ಕಣ್ಣನ್ನೂ, ಹೃದಯವನ್ನೂ, ಮನಸ್ಸನ್ನೂ, ಆತ್ಮವನ್ನೂ ತೊಯ್ಯಿಸಿ, ಹಗುರಗೊಳಿಸುವ ಹೊಂಬೆಳಕು! ಕಣ್ಣು ತೆರೆದು, ಎರಡೂ ಕೈಗಳ ಬೆರಳುಗಳನ್ನು ಹಗುರ ಮುಷ್ಟಿಮಾಡಿ ಉಗುರುಗಳನ್ನು ಉಜ್ಜಿಕೊಂಡೆ, ಅವನು ನನ್ನೆಡೆಗೆ ನೋಡಿದ, ತಟ್ಟನೆ ಕಂಡುಹಿಡಿದ, "ಸಣ್ಣವರಿದ್ದಾಗ ಮಾಡ್ತಿದ್ವಿ ಅಲ್ವಾ?"

"ಹೂಂ, ಹೀಗೇ ಕೈಯುಗುರುಗಳನ್ನು ಬೆಳ್ಳಕ್ಕಿಗಳ ನೋಡುತ್ತ ಉಜ್ಜಿಕೊಂಡರೆ ಒಂದಾದರೂ ಉಗುರಿನ ಮೇಲೆ ಬೆಳ್ಳಗಿನ ಸಣ್ಣ ಚುಕ್ಕಿ ಮೂಡುತ್ತಿತ್ತು,"

"ಜೊತೆಗೆ ಏನೋ ಹೇಳ್ತಿದ್ವಿ ಅಲ್ವಾ?"

"ನೀವೇನು ಹೇಳ್ತಿದ್ರೋ ಗೊತ್ತಿಲ್ಲ, ನಾವಂತೂ ಕೈಬೆರಳುಗಳ ಪರಸ್ಪರ ಉಜ್ಜಿಕೊಳ್ಳುತ್ತ ಬೆಳ್ಳಕ್ಕಿಗಳ ನೋಡುತ್ತ 'ಬೆಳ್ಳಕ್ಕಿ ಬೆಳ್ಳಕ್ಕಿ ಬೆಳ್ಳಿ ಕೊಡು' ಅಂತಿದ್ವಿ."

ಅವನು ಮರೆತಿದ್ದುದ್ದನ್ನು ಒಪ್ಪಿಕೊಂಡ, "ಹೂಂ ಹಾಗೇ ಏನೋ ಅನ್ತಿದ್ವಿ!"

ನಾನು ಕೈಬೆರಳುಗಳ ಉಜ್ಜುವುದನ್ನು ನಿಲ್ಲಿಸಿ ಉಗುರುಗಳ ನೋಡಿಕೊಂಡೆ. ಕರುಣ ಮಗ್ಗುಲಾಗಿ ನನ್ನೆಡೆಗೆ ಹಲ್ಲು ಕಿರಿದುಕೊಂಡು ನೋಡುತ್ತಿದ್ದ, ನನ್ನ್ಯಾವ ಬೆರಳುಗಳ ಮೇಲೂ ಬಿಳೀ ಚುಕ್ಕಿ ಮೂಡಿರಲಿಲ್ಲ. ನಮ್ಮ ಮುಗ್ಧತೆ ಮಾಯವಾದಂತೆ, ಬಾಲ್ಯದ ಮಾಂತ್ರಿಕ ಪ್ರಪಂಚದ ಬಾಗಿಲೂ ನಮ್ಮ ಪಾಲಿಗೆ ಬಂದಾಗುತ್ತದೆ, ಅದರೊಳಗಿನ ಜಾದೂಗಳೆಲ್ಲ ನಮ್ಮ ಮೇಲೆ ಕೆಲಸ ಮಾಡುವುದನ್ನು ನಿಲ್ಲಿಸಿಬಿಡುತ್ತವೆ. ನನ್ನ ಪೆಚ್ಚು ಮುಖವನ್ನು ನೋಡಿ ಅವನು ಮುಚ್ಚಿದ ಬಾಯಿಯಿಂದ ಪುಸಪುಸನೆ ಶಬ್ದ ಹೊರಡಿಸಿ, ಕಡೆಗೆ ತಡೆಯಲಾಗದೇ ಗಹಗಹಿಸಿ ನಕ್ಕ, ನಾನೂ ನಕ್ಕೆ. ಮೇಲೆ ಬೆಳ್ಳಕ್ಕಿಗಳ ಸಾಲು ಸಾಲು ಮೆರವಣಿಗೆ ಸಾಗಿಯೇ ಇತ್ತು. ನಾವಿಬ್ಬರೂ ಮಾತನಾಡದೇ ಹಾಗೇ ಬೂದಿಬಣ್ಣದ ಮೋಡಗಳ ನೋಡುತ್ತ ಮಲಗಿಕೊಂಡಿದ್ದೆವು...

ಕಡೆಗೂ ಎಲ್ಲ ಕತ್ತಲಾದ ಮೇಲೆ ಎದ್ದು ನಿಂತು, ಮೈಮುರಿದುಕೊಂಡು, ಕೆಳಗಿಳಿದು ಬಂದೆವು. "ನಿಮ್ಮ ಮನೆಗೆ ಬಂದರೆ ರಾತ್ರಿ ಊಟ, ಉಪಚಾರ ಅಂತೆಲ್ಲ ಅತೀ ಮಾಡ್ತೀರಿ" ಅಂದಿದ್ದುದಕ್ಕೆ, "ಇಲ್ಲ ಕಣ್ರೊ, ಇವತ್ತ್ಯಾರು ನಿಮಗೆ ಅನ್ನ ಹಾಕೋರು? ಬರೀ ಸಂಜೆ ತಿಂಡಿ ಅಷ್ಟೇ! ಆಮೇಲೆ ಎಲ್ಲರನ್ನೂ ಒದ್ದು ಓಡಿಸಿಬಿಡ್ತೀನಿ, ಬನ್ರೊ, ಪ್ಲೀಸ್ ಬನ್ರೋ!" ಅಂದು ಗೋಗರೆದ್ದಿದ್ದ ಮಂಜುಳಾ ಮೇಡಂ ನಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ತಿಂಡಿ ತಯ್ಯಾರು ಮಾಡಿಟ್ಟದ್ದರು, ಹೆಡಿಗೆಯಷ್ಟು ಪುರಿಯುಪ್ಪಿಟ್ಟು, ನೆಂಚಿಕೊಳ್ಳಲು ಮೊಸರು–ವಗ್ಗರಣೆ, ಮೆಣಸಿನ ಕಾಯಿ ಬೋಂಡ, ಸಿಹಿಗಿರಲಿ ಅಂತ ಡಬ್ಬದಲ್ಲಿದ್ದ ಬೂಂದಿ ಲಾಡು, ಜೊತೆಗೆ ಸಂಜೆಯ ಸಮಯ ಅಂತಾ ಟೀ! ಜೊತೆಗೆ ಅವರ ಆರು ತಿಂಗಳ ಪುಟ್ಟ ಮಗಳು (ನನ್ನ ಹೊಸಾ girl friend) 'ಖುಷಿ', ಮಂಜುಳಾ ಮೇಡಮ್‌ರ ಹಾಡು, ತಮಾಷೆ, ಕತೆಗಳು, ಅಡ್ಡಹೆಸರುಗಳು, ಒತ್ತಾಯ, (ಅತೀ) ಉಪಚಾರ...

...ಬಸ್ಸಿನಲ್ಲಿ ಕುಳಿತವನು ನನ್ನ ಸ್ನೇಹಿತ–ಸ್ನೇಹಿತೆಯರನೇಕರಿಗೆ ಎಸ್ಸೆಮೆಸ್ ಮಾಡಿದೆ, "ಈಗಲೇ ಟೆರೇಸ್ ಮೇಲೆ ಹೋಗಿ ನೋಡಿ, ಎಂಥಾ ಅದ್ಭುತವಾದ ಗೋಧೂಳಿ ಬೆಳಕು ಬಿದ್ದಿದೆ!". ಒಬ್ಬ ಸ್ನೇಹಿತೆ ತಕ್ಷಣ ಉತ್ತರಿಸಿದಳು, "ನಾನಾಗ್ಲೇ ಟೆರೇಸ್ ಮೇಲಿದೀನಿ!" ಇನ್ನೊಬ್ಬಳು ಕಾಯ್ದು ಕಾಯ್ದು ರಾತ್ರಿ ಎಂಟಕ್ಕೆ ರಿಪ್ಲೇ ಕಳಿಸಿದಳು, "ಹೋಗಿ ನೋಡಿದೆ, ಏನಿಲ್ಲಾ? ಬರೀ ರಾತ್ರಿಯ ಕತ್ತಲು ಅಷ್ಟೇ!" ನಾನು ತಲೆ ಚಚ್ಚಿಕೊಂಡು ತಕ್ಷಣ ಅವಳಿಗೆ ಬಯ್ಯಲು ಫೋನ್ ಮಾಡಿದೆ...

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** shivu_ks@rediffmail.com